

> ಕೃತಿ ಪ್ರಕಟವಾದ 50 ವರ್ಷಗಳ ಬಳಿಕವೂ ಆ ಕೃತಿ ಬದುಕಿದ್ದರೆ, ಜನರ ಮೇಲೆ ಪರಿಣಾಮ ಬೀರಿದ್ದರೆ ಅದು ಒಳ್ಳೆಯ ಪುಸ್ತಕ. ಒಂದು ಕೃತಿ ಪ್ರಕಟಗೊಂಡು ಕೆಲವು ವರ್ಷಗಳಾದರೂ ಜನರ ಮನಸ್ಸಿನಲ್ಲಿ ಇಲ್ಲ ಎಂದಾದರೆ, ಅದು ಮೃತ ಕೃತಿ.

ಕೆಲವರು. ಯಾರು ಹೇಳಿದ್ದು ಇವೆಲ್ಲ? ಇಂಥವರಿಗೆ ಋಗ್ವೇದ ಓದಲು ಹೇಳಬೇಕು. ಅದರಲ್ಲಿಯೇ ರಿಷಿಕೆಯರ ಉಲ್ಲೇಖ ಇದೆ. ನಮ್ಮ ಪರಂಪರೆಯೇ ಲಿಬರಲ್ ಆಗಿದೆ.

ಇನ್ನು ಜಾತಿ ವಿಷಯ. ಭಗವದ್ಗೀತೆಯಲ್ಲಿ ಕೃಷ್ಣ ಹೇಳುತ್ತಾನೆ, 'ನಾನು ನಾಲ್ಕು ವರ್ಣಗಳನ್ನು ಮಾಡಿದ್ದು, ಗುಣ ಮತ್ತು ಕರ್ಮದ ಹಿನ್ನೆಲೆಯಲ್ಲಿ.' ಇಲ್ಲಿ ಎಲ್ಲೂ ಹುಟ್ಟಿನಿಂದ ಜಾತಿ ಎಂದು ಹೇಳಿಯೇ ಇಲ್ಲ. ಅಂಬೇಡ್ಕರ್ ಅವರು ಬರೆದ 'who are the shudras'ದಲ್ಲಿ ವೇದಗಳ ಉಲ್ಲೇಖ ಮಾಡಿದ್ದಾರೆ. 15 ಸಾವಿರ ವರ್ಷಗಳ ಹಿಂದೆ ಜಾತಿಪದ್ಧತಿ ಇಷ್ಟೊಂದು ಜಟಿಲವಾಗಿರಲಿಲ್ಲ ಎಂದು ಹೇಳಿದ್ದಾರೆ. ರಾಮನ ಆಸ್ಥಾನ ಅರ್ಚಕ ಸತ್ಯಕಾಮ್ ಜಾವಾಲಿ ಅವರು ಶೂದ್ರ ತಾಯಿಗೆ ಹುಟ್ಟಿದ ಮಗ. ತಂದೆ ಯಾರು ಅಂತ ಯಾರಿಗೂ ಗೊತ್ತಿರಲಿಲ್ಲ. ಅವರು ತುಂಬಾ ಪ್ರತಿಭಾಶಾಲಿ ಆಗಿದ್ದರು. ಹೀಗಿತ್ತು ನಮ್ಮ ಸಮಾಜ.

◆ **ನಿಮ್ಮನ್ನು ಪಾಪ್‌ಸ್ಟಾರ್ ಅಂತ ಕರಿತಾರೆ. ನಮ್ಮಲ್ಲಿ ಜನಪ್ರಿಯ ಬರಹಗಾರರ ಕುರಿತು ಅಕಡೆಮಿಕ್ ವಲಯದಲ್ಲಿ ಒಂದು ರೀತಿಯ ನಿರ್ಲಕ್ಷ್ಯ ಇದೆಯಲ್ಲವೇ? ಈ ಕುರಿತು ನಿಮ್ಮ ಅಭಿಪ್ರಾಯ?**

ಎಲ್ಲರಿಗೂ ಅವರವರ ಅಭಿಪ್ರಾಯಗಳನ್ನು ಹೇಳುವ ಹಕ್ಕಿದೆ. ನಾನು ಏನು ಮಾಡುತ್ತಿದ್ದೇನೆ ಎಂದು ನನಗೆ ಗೊತ್ತಿದೆ. ನನಗೆ ನನ್ನ ದೇಶದ ಬಗ್ಗೆ ಹೆಮ್ಮೆ ಇದೆ. ನಮ್ಮ ಸಾವಿರಾರು ವರ್ಷಗಳ